Crl Mis– 6/2022

ಆರ್. ಡಬ್ಲೂ – 1

ಸಾಕ್ಷಿಯನ್ನು ದಿಃ 23.08.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀಮತಿ ಜಿ.ಸಿ.ಜೆ ವಕೀಲರಿಂದ –**

8 ವರ್ಷಗಳ ಹಿಂದೆ ನಾನು ಅರ್ಜಿದಾರಳನ್ನು ಮದುವೆಯಾಗಿದ್ದೇನೆ. ನಮ್ಮದು ಪ್ರೇಮ ವಿವಾಹ ಅಲ್ಲ. ನಮ್ಮ ಮನೆಯ ಕಡೆ ಒಳ್ಳೆ ಅನೂಕೂಲ ಇದೆ ಎಂದು ಅರ್ಜಿದಾರರನ್ನು ನನಗೆ ಕೊಡಲು ಒಪ್ಪಿಕೊಂಡರು ಎಂದರೆ, ಸಾಕ್ಷಿಯು ಒಳ್ಳೆಯ ಹುಡುಗ ಮತ್ತು ಮನೆತನ ಎಂದು ಕೊಡಲು ಒಪ್ಪಿಕೊಂಡರು ಎನ್ನುತ್ತಾರೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ಅದರಲ್ಲಿ ಕಾಣುವ ಮಗು ನನ್ನ ಮಗ ಎಂದು ಒಪ್ಪಿಕೊಂಡಿದ್ದರಿಂದ ಆ ಫೋಟೋವನ್ನು ನಿಪಿ–3 ಎಂದು ಗುರುತಿಸಲಾಯಿತು. ನಿಪಿ–3 ರಲ್ಲಿ

ಕಾಣುವ ಮನೆ ನಮ್ಮದು. ಆ ಮನೆಗೆ ಸುಮಾರು 2 ವರ್ಷಗಳ ಹಿಂದೆ ಗೃಹ ಪ್ರವೇಶ ಆಗಿದೆ. ಸದರಿ ಮನೆ ಈಗ 70–80 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಸದರಿ ಮನೆ ಮೂರು ಬಿ ಹೆಚ್ ಕೆ ಮನೆ ಎಂದರೆ, ಸಾಕ್ಷಿಯು ಎರಡು ಬಿ ಹೆಚ್ ಕೆ ಮನೆ ಎನ್ನುತ್ತಾರೆ.

ನನ್ನ ಮದುವೆಗೂ ಮೊದಲಿನಿಂದಲೂ ನನಗೆ ಮದ್ಯಪಾನ ಮಾಡುವ ಹವ್ಯಾಸ ಇದೆ ಎಂದರೆ ಸರಿಯಲ್ಲ. ಮುಂದುವರೆದು ಮದುವೆಯಾದ ನಂತರ ಮದ್ಯಪಾನ ಮಾಡಲು ಪ್ರಾರಂಭಿಸಿದ್ದೇನೆ. ಮದ್ಯಪಾನ ಮಾಡಿದಾಗ ಅರ್ಜಿದಾರಳಿಗೆ ಕಿರುಕುಳ ನೀಡುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮ ಊರಿನಲ್ಲಿ ಒಳ್ಳೆಯ ಗೌರವವನ್ನು ಪಡೆದಿದ್ದಾರೆ ಎಂದರೆ ಸರಿ. ನಾನು ಮದ್ಯಪಾನ ಮಾಡುವುದರಿಂದ ನನ್ನ ತಂದೆ ತಾಯಿಯ ಗೌರವಕ್ಕೆ ಧಕ್ಕೆಯಾಗಿದೆ ಎನ್ನುವುದು ಸರಿಯಲ್ಲ. ಮುಂದುವರೆದು ನಾನು ಯಾವಾಗಲೂ ಮದ್ಯಪಾನ ಮಾಡುವುದಿಲ್ಲ, ಅರ್ಜಿದಾರಳು ನನ್ನನ್ನು ತೊರೆದಿರುವುದರಿಂದ ಬೇಸವಾದಾಗ ನಾನು ಮದ್ಯಪಾನ ಮಾಡುತ್ತೇನೆ ಎನ್ನುತ್ತಾರೆ. ನಾನು ಮದ್ಯಪಾನ ಮಾಡಿ ನನ್ನ ತಂದೆ ತಾಯಿಗೆ ಕಿರುಕುಳ ನೀಡುತ್ತಿದ್ದ ಕಾರಣ ನನ್ನನ್ನು ಪ್ರತ್ಯೇಕ ಮಾಡಿ ನನ್ನನ್ನು ಇರಿಸಿದ್ದರು ಎನ್ನುವುದು ಸರಿಯಲ್ಲ. ನಾನು ಮದ್ಯಪಾನ ಮಾಡುವ ಸಂಬಂಧ ನನ್ನ ಮತ್ತು ಅರ್ಜಿದಾರಳ ಕುಟುಂಬದವರು ಈ ಅರ್ಜಿ ದಾಖಲಿಸುವ ಪೂರ್ವದಲ್ಲಿ ಸುಮಾರು 10 ಬಾರಿ ಪಂಚಾಯತಿಯನ್ನು ಮಾಡಿದ್ದಾರೆ ಎನ್ನುವುದು ಸರಿಯಲ್ಲ.

ಅರ್ಜಿದಾರಳ ಶೀಲ ಶಂಕಿಸಿ ನಾನು ಅನುಮಾನ ಪಡುತ್ತಿದ್ದೆ ಎನ್ನುವುದು ಸರಿಯಲ್ಲ. ಪ್ರತೀ ಬಾರಿ ಪಂಚಾಯತಿ ಮಾಡಿದಾಗ ನಾನು ಪಂಚಾಯತಿದಾರರ ಸಮಕ್ಷಮ ಇನ್ನೂ ಮುಂದೆ ಅರ್ಜಿದಾರಳ ಮೇಲೆ ನಾನು ಅನುಮಾನ ಮಾಡುವುದಿಲ್ಲ ಮತ್ತು ಮದ್ಯಪಾನ ಮಾಡುವುದಿಲ್ಲ ಎಂದು ಭರವಸೆ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. ಪಂಚಾಯತಿಯಾದ ಬಳಿಕ ನಾನು ಅರ್ಜಿದಾರಳೊಂದಿಗೆ ಹೋದಾಗ ಕೇವಲ 15 ದಿನಗಳು ಮಾತ್ರ ಚೆನ್ನಾಗಿದ್ದು, ಪುನಃ ಹಳೆಯ ಚಾಳಿಯನ್ನು ಮುಂದುವರೆಸಿ ಅರ್ಜಿದಾರಳ ಮೇಲೆ ಅನುಮಾನ ಪಟ್ಟು ಮದ್ಯಪಾನ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. 2–3 ಬಾರಿ ಅರ್ಜಿದಾರಳಿಗೆ ನಾನು ದೈಹಿಕ ಹಲ್ಲೆಯನ್ನು ಮಾಡಿದ್ದೆ ಎನ್ನುವುದು ಸರಿಯಲ್ಲ. ನಾನು ಹಲ್ಲೆ ಮಾಡಿದ ಸಂಬಂಧ ಸಾಗರ ಮತ್ತು ಶಿವಮೊಗ್ಗ ಪೋಲಿಸ್ ಠಾಣೆಗಳಲ್ಲಿ ಅರ್ಜಿದಾರಳು ದೂರನ್ನು ಸಹ ಕೊಟ್ಟಿದ್ದಳು ಎಂದರೆ, ಸಾಕ್ಷಿಯು ಸಾಗರದಲ್ಲಿ ಯಾವುದೇ ದೂರನ್ನು ಕೊಟ್ಟಿಲ್ಲ. ನಾನು ಮತ್ತು ಅರ್ಜಿದಾರಳು ಬೇರೆ ಬೇರೆಯಾದ ನಂತರ ಸುಮಾರು 21 ದಿನಗಳವರೆಗೆ ಅರ್ಜಿದಾರಳು ಮನೆಗೆ ಬಂದಿರಲಿಲ್ಲ, ಆ ಸಂದರ್ಭದಲ್ಲಿ ಅರ್ಜಿದಾರಳು ನನ್ನ ಮೇಲೆ ಸುಳ್ಳು ದೂರನ್ನು

ಕೊಟ್ಟಿದ್ದಾಳೆ ಎಂದು ನುಡಿಯುತ್ತಾರೆ. ಪೋಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆಯಿಸಿಕೊಂಡು ನನಗೆ ತಿಳುವಳಿಕೆ ಹೇಳಿದರು ಎಂದರೆ, ಸಾಕ್ಷಿಯು ಅರ್ಜಿದಾರಳಿಗೆ ಬೈದ್ದು ಗಂಡನೊಂದಿಗೆ ಚೆನ್ನಾಗಿ ಬಾಳು ಎಂದು ಕಳುಹಿಸಿದರು ಎನ್ನುತ್ತಾರೆ.

ಮಧ್ಯಪಾನ ಮಾಡಿದಾಗ ನನ್ನ ವರ್ತನೆ ಸರಿಯಾಗಿ ಇರುವುದಿಲ್ಲ, ಆದ ಕಾರಣ ನನ್ನನ್ನು ನನ್ನ ತಂದೆ ತಾಯಿ ಬೇರೆ ಮನೆ ಮಾಡಿ ಇಟ್ಟಿದ್ದಾರೆ ಎಂದರೆ, ಸಾಕ್ಷಿಯು 8 ವರ್ಷಗಳಿಂದ ನನ್ನನ್ನು ನನ್ನ ತಂದೆ ತಾಯಿಯವರೇ ನೋಡಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ.ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಅರ್ಜಿದಾರಳು ಮತ್ತು ನನ್ನ ತಂದೆ ತಾಯಿಯರು ಹಾಗೂ ನಾವುಗಳೆಲ್ಲಾ ವಕೀಲರ ಕಚೇರಿಯಲ್ಲಿ ರಾಜೀ ಪಂಚಾಯತಿ ಮಾಡಿದು, ಆ ಸಂದರ್ಭದಲ್ಲಿ ನಾನು ಇನ್ನು ಮುಂದೆ ಅರ್ಜಿದಾರಳ ಶೀಲದ ಕುರಿತು ಶಂಕೆ ಮಾಡುವುದಿಲ್ಲ ಹಾಗೂಮಧ್ಯಪಾನ ಮಾಡುವುದಿಲ್ಲ ಹಾಗೂ ಅರ್ಜಿದಾರಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ ಮುಚ್ಚಳಿಕೆ ಬರೆದುಕೊಟ್ಟಿದ್ದೆ ಎಂದರೆ ಸರಿ. ಮುಂದುವರೆದು ನನಗೆ ಅಷ್ಟೊಂದು ಓದುವುದು ಬರುವುದಿಲ್ಲ, ಆದ್ದರಿಂದ ಆ ಸಂದರ್ಭದಲ್ಲಿ ನಾನು ಸದರಿ ಮುಚ್ಚಳಿಕೆಗೆ ಓದದೇ ಸಹಿ ಮಾಡಿದ್ದೇನೆ ಎನ್ನುತ್ತಾರೆ. ವಕೀಲರ ಕಚೇರಿಯಲ್ಲಿ ಪಂಚಾಯತಿ ಮಾಡುವಾಗ ನನಗೆ ಮಗ ಹುಟ್ಟಿದ್ದು, ನಾನು ನನ್ನ ಅಣ್ಣ-ಅತ್ತಿಗೆಯಂತೆ ಚೆನ್ನಾಗಿ ಜೀವನ ನಡೆಸಿಕೊಂಡು ಹೋಗುತ್ತೇನೆ, ಅರ್ಜಿದಾರಳಿಗೆ ಯಾವುದೇ ತೊಂದರೆ ನೀಡುವುದಿಲ್ಲ ಎಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಆ ಮುಚ್ಚಳಿಕೆ ಬರೆದುಕೊಟ್ಟ ನಂತರ ಒಂದು ವರ್ಷದವರೆಗೆ ನಾನು ಮತ್ತು ಅರ್ಜಿದಾರಳು ಚೆನ್ನಾಗಿ ಇದ್ದೆವು. ನಂತರ ಪುನಃ ನಾನು ನನ್ನ ಹಳೆಯ ಚಾಳಿ ಮುಂದುವರೆಸಿ ಮಧ್ಯಪಾನ ಮಾಡಿ ಅರ್ಜಿದಾರಳ ಮೇಲೆ ಅನುಮಾನ ಪಡುತ್ತಿದ್ದೆ ಎನ್ನುವುದು ಸರಿಯಲ್ಲ. ಆದ ಕಾರಣ ಅರ್ಜಿದಾರಳು ತನ್ನ ತವರು ಮನೆಯಲ್ಲಿ ಉಳಿದುಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. 4 ವರ್ಷಗಳಿಂದ ಅರ್ಜಿದಾರಳು ತನ್ನ ತವರು ಮನೆಯಲ್ಲಿ ಇದ್ದಾಳೆ ಎಂದರೆ, ನಾನು ಸಾಕಷ್ಟು ಬಾರಿ ಅವಳಿಗೆ ಕರೆದರೂ ನನ್ನೊಂದಿಗೆ ಬಂದಿಲ್ಲ ಎನ್ನುತ್ತಾರೆ.

4 ವರ್ಷಗಳಿಂದ 1 ಮತ್ತು 2 ನೇ ಅರ್ಜಿದಾರರ ಜೀವನೋಪಾಯಕ್ಕೆ ನಾನು ಯಾವುದೇ ಹಣಕಾಸಿನ ಸಹಾಯ ಮಾಡಿಲ್ಲ. ಮುಂದುವರೆದು 3 ತಿಂಗಳ ಹಿಂದೆ ನಾನೇ 2 ನೇ ಅರ್ಜಿದಾರನನ್ನು ಕರೆದುಕೊಂಡು ಹೋಗಿ ಶಾಲೆಗೆ ಸೇರಿಸಿ ಶಾಲೆಯ ಶುಲ್ಕವನ್ನು ಸಹ ಪಾವತಿ ಮಾಡಿ ಬಂದಿದ್ದೇನೆ ಎಂದು ನುಡಿಯುತ್ತಾರೆ. ಮಧ್ಯಂತರ ಜೀವನಾಂಶದ ಆದೇಶವಾದ ನಂತರ ಈವರೆಗೆ ಕೇವಲ 5 ಸಾವಿರ ರೂ.ಗಳ ಜೀವನಾಂಶವನ್ನು ಮಾತ್ರ ನಾನು ಅರ್ಜಿದಾರರಿಗೆ ಕೊಟ್ಟಿದ್ದೇನೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ 2 ನೇ ಪುಟದ 2 ನೇ ಖಂಡಿಕೆಯಲ್ಲಿ ನಾನು ಮತ್ತು ನನ್ನ ತಂದೆ ತಾಯಿ ಕೂಲಿ ಕೆಲಸ ಮಾಡುತ್ತಿರುವುದಾಗಿ ಬರೆಸಿದ್ದೇನೆ ಎಂದರೆ ಸರಿ. ನಮ್ಮ ಜಮೀನು ಕೆಲಸವನ್ನು ನನ್ನ ತಂದೆ ಆಳುಗಳನ್ನು ಇಟ್ಟು ಮಾಡಿಸುತ್ತಾರೆ ಎನ್ನುವುದು ಸರಿಯಲ್ಲ. ಮುಂದುವರೆದು ನಮ್ಮ ಕುಟುಂಬಕ್ಕೆ ಸ್ವಂತ ಜಮೀನು 1 ½ ಎಕರೆ ಇದೆ. ಉಳಿದ ಜಾಗ ಬಗರ್ ಹುಕುಂ ಆಗಿದ್ದು, ಅದು ಕೇಸು ನಡೆಯುತ್ತಿದ್ದೆ ಎನ್ನುತ್ತಾರೆ. ವೀರಣ್ಣನಬೆನವಳ್ಳಿ, ಆಯನೂರು ಹೋಬಳಿ, ಶಿವಮೊಗ್ಗ ತಾಲ್ಲೂಕಿನ ಸರ್ವೇ ನಂಬರ್ 72 ರಲ್ಲಿ 4 ಎಕರೆ 10 ಗುಂಟೆ ಜಾಗವು ನನ್ನ ತಂದೆಯ ಹೆಸರಿಗೆ ಇರುವುದಾಗಿ ಪಹಣಿ ಪತ್ರಿಕೆಯಲ್ಲಿ ನಮೂದು ಇದೆ ಎಂದರೆ, ಸಾಕ್ಷಿಯು ಅದು ಬಗರ್ ಹುಕುಂ ಜಾಗ ಎಂದು ನುಡಿಯುತ್ತಾರೆ. ಸದರಿ ಆರ್ ಟಿ ಸಿಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನನ್ನ ಅಣ್ಣನ ಹೆಸರಿಗೆ 20 ಗುಂಟೆ ಜಾಗವನ್ನು ಸದರಿ ಸರ್ವೇ ನಂಬರ್ 72 ರ ಪೈಕಿ ನನ್ನ ತಂದೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ನನ್ನ ಅಣ್ಣ ಸ್ವಂತ ಹಣದಲ್ಲಿ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಆರ್.ಟಿ.ಸಿಯಲ್ಲಿ ಸರ್ವೇ ನಂಬರ್ 72/2 ಅನ್ನು ನನ್ನ ತಂದೆ ನನ್ನ ಅಣ್ಣನಿಗೆ ಮಾಡಿಕೊಟ್ಟಿದ್ದಾಗಿ ಬರೆದಿದೆ ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರಿಗೆ ಯಾವುದೇ ಇಟ್ಟಿಗೆ ಫ್ಯಾಕ್ಟರಿ ಇಲ್ಲ. ಇಟ್ಟಿಗೆ ಫ್ಯಾಕ್ಟರಿಯನ್ನು ನನ್ನ ತಂದೆ ನನ್ನ ಅಣ್ಣನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಅದನ್ನು ನನ್ನ ಅಣ್ಣನೇ ಸ್ವಂತ ಮಾಡಿಕೊಂಡಿದ್ದಾನೆ ಎನ್ನುತ್ತಾರೆ. ಸರ್ವೇ ನಂಬರ್ 72 ರ 4 ಎಕರೆ 30 ಗುಂಟೆ ಪೈಕಿ ಇಟ್ಟಿಗೆ ಫ್ಯಾಕ್ಟರಿ ಇದೆ ಎಂದರೆ ಸರಿಯಲ್ಲ. ಮುಂದುವರೆದು ಅದನ್ನು ನನ್ನ ಅಣ್ಣ ಸ್ವಂತ ಹಣದಿಂದ ಮಾಡಿಕೊಂಡಿದ್ದಾನೆ ಎನ್ನುತ್ತಾರೆ.

ನನ್ನ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು. ಸರ್ವೇ ನಂಬರ್ 72 ರ 4 ಎಕರೆ 30 ಗುಂಟೆ ಪೈಕಿ 20 ಗುಂಟೆಯನ್ನು ನನ್ನ ಅಣ್ಣನಿಗೆ ನನ್ನ ತಂದೆ ಹಿಸ್ಸೆ ಬಾಬ್ತು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿರುವ ಕಾರಣ ನನ್ನ ಅಣ್ಣನಿಗೆ ಇಟ್ಟಿಗೆ ಫ್ಯಾಕ್ಟರಿಯನ್ನು ಕೊಟ್ಟಿದ್ದು, ನಮ್ಮ ಕುಟುಂಬದ ಎಲ್ಲಾ ವ್ಯವಹಾರ ಒಟ್ಟಿಗೆ ನಡೆಯುತ್ತಿದೆ ಎನ್ನುವುದು ಸರಿಯಲ್ಲ. ಇಟ್ಟಿಗೆ ಫ್ಯಾಕ್ಟರಿಯಲ್ಲಿ ನನ್ನ ಅಣ್ಣ ಚೆನ್ನಾಗಿ ವ್ಯವಹಾರ ಮಾಡುತ್ತಿದ್ದಾನೆ ಎಂದರೆ ಸರಿ. ವ್ಯವಹಾರಿಕವಾಗಿ ನಾನು, ನನ್ನ ಅಣ್ಣ ಹಾಗೂ ನನ್ನ ತಂದೆ ಎಲ್ಲಾ ಒಂದೇ ಎನ್ನುವುದು ಸರಿಯಲ್ಲ.

ಸರ್ವೇ ನಂಬರ್ 72 ಅನ್ನು ಹೊರತು ಪಡಿಸಿ, ಕೋಟೆ ಗಂಗೂರು ಗ್ರಾಮದ ಸರ್ವೇ ನಂಬರ್ 5/2 ರಲ್ಲಿ 2 ಎಕರೆ 36 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಇದೆ ಎಂದರೆ, ಸಾಕ್ಷಿಯು ಅದರಲ್ಲಿ

ನನ್ನ ತಂದೆ ಮತ್ತು ಸಹೋದರರಾದ 6 ಜನರಿಗೆ ಹಿಸ್ಸೆ ಇದ್ದು, ಈ ಕುರಿತು ವ್ಯಾಜ್ಯ ನಡೆಯುತ್ತಿದ್ದೆ ಎನ್ನುತ್ತಾರೆ. ಸದರಿ ಪಹಣಿ ಪತ್ರಿಕೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಮೇಲಿನ 2 ಎಕರೆ 36 ಗುಂಟೆ ಜಮೀನು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ 2 ಎಕರೆ 36 ಗುಂಟೆ ಕೋಟಿಗಟ್ಟಲೆ ಬೆಲೆ ಬಾಳುವ ಜಮೀನು ಎಂದರೆ ಸರಿಯಲ್ಲ. ಮೇಲಿನಂತೆ ನಮ್ಮ ಕುಟುಂಬಕ್ಕೆ ಜಮೀನು ಇದ್ದರೂ ಸಹ ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

1 ನೇ ಅರ್ಜಿದಾರಳ ತಂದೆ ಹಮಾಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರ ತಾಯಿ ಮನೆ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. 4 ವರ್ಷಗಳಿಂದ ಅರ್ಜಿದಾರಳು ಮನೆ ಕೆಲಸಕ್ಕೆ ಹೋಗುತ್ತಿದ್ದಾಳೆ ಎಂದರೆ ಸರಿಯಲ್ಲ. ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದಾಳೆ ಎನ್ನುತ್ತಾರೆ. ಸಾಮಾನ್ಯವಾಗಿ ಜಮೀನು, ಆಸ್ತಿ ಅಥವಾ ವ್ಯವಹಾರ ಇರುವವರು ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಒಟ್ಟು 7 ಎಕರೆ 26 ಗುಂಟೆ ಜಮೀನು ಹಾಗೂ ಸುವ್ಯವಸ್ಥಿತವಾದ ಅರ್.ಸಿ.ಸಿ ಮನೆ ಹಾಗೂ ಇಟ್ಟಿಗೆ ಫ್ಯಾಕ್ಟರಿ ಇದ್ದರೂ ಸಹ ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಎನ್ನುವುದು ಸರಿಯಲ್ಲ.

ನಿಪಿ-3 ರ ಫೋಟೋದಲ್ಲಿ ಕಾಣುವ ಮನೆಯನ್ನು ನನ್ನ ತಂದೆ ನನಗಾಗಿಯೇ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಮದ್ಯಪಾನ ಮಾಡುವುದು ಬಿಟ್ಟು ಒಳ್ಳೆಯ ವ್ಯಕ್ತಿಯಾಗಿ ಬದಲಾದರೆ ನನ್ನ ತಂದೆ ನನ್ನ ಅಣ್ಣನ ಹಾಗೆ ನನಗೂ ಸಹ ಆಸ್ತಿ ಕೊಡುತ್ತಾರೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಮದ್ಯಪಾನ ಮಾಡುವುದು ಬಿಟ್ಟರೆ ನನ್ನ ಸಂಸಾರ ಸರಿ ಹೋಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿದಂತೆ ಮಾಸಿಕ ತಲಾ 25 ಸಾವಿರ ರೂ.ಗಳಂತೆ ಜೀವನಾಂಶ ಕೊಡಲು ನಾನು ಸಾಮರ್ಥ್ಯ ಹೊಂದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.